ಆ) ಕೃಷ್ಣಾ ಮೇಲ್ದಂಡೆ ಯೋಜನೆಯ ಹಣದಲ್ಲಿ ಅಧಣ್ಯೀಕರಣ ಸಲುವಾಗಿ ಈಗಾಗಲೇ 4 ವರ್ಷ ಅವಧಿಯ ಕಾರ್ಯಗಳನ್ನು 1000 ಲಕ್ಷ ರೂಪಾಯಿಗಳ ಅಂದಾಜು ವೆಚ್ಚದ ಮಾಸ್ಟರ್ ಆಕ್ಷನ್ ಪ್ಲಾನ್ ತಯಾರಿಸಿದ್ದು, ಕೆಲಸಗಳನ್ನು 1992ರಿಂದ ಕೈಗೊಳ್ಳಲಾಗಿದೆ. ಮತ್ತು ಭೂ ಸಂರಕ್ಷಣೆ ಸಲುವಾಗಿ ರೂ. 29557 ಲಕ್ಷದ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ.

ಡೀಸೆಲ್ ಜನರೇಟರ್ ಸ್ಥಾಪಿಸುವ ಬಗ್ಗೆ

290- ಶ್ರೀ ನಾರಾಯಣ ರಾವ್ ಮನಹಳ್ಳಿ (ಬೀದರ್) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ಡೀಸಲ್ ಜನರೇಟರ್‌ಗಳನ್ನು ಸ್ಥಾಪಿಸಲಾಗಿದೆ?

ಆ) ಹೊಸದಾಗಿ ಯಾವ ಯಾವ ಜಿಲ್ಲೆಗಳಲ್ಲಿ ಡೀಸಲ್ ಜನರೇಟರ್‌ಗಳನ್ನು ಸ್ಥಾಪಿಸಲಾಗುವುದು ಇದಕ್ಕೆ ತಗಲುವ ವೆಚ್ಚವೆಷ್ಟು?

ಇ) ಇದಕ್ಕಾಗಿ ವಿದೇಶಿ ನೆರವನ್ನು ಕೋರಿದೆಯೇ?

ಈ) ರಾಜ್ಯದ ಅತಿ ಹಿಂದುಳಿದ ಜಿಲ್ಲೆಯಾದ ಬೀದರ್‌ನಲ್ಲಿ ಡೀಸಲ್ ಜನರೇಟರ್ ಸ್ಥಾಪಿಸುವ ಬಗ್ಗೆ ಪರಿಶೀಲಿಸಲಾಗುವುದೇ?

ಉ) ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):

ಅ) ಬೆಂಗಳೂರು ಜಿಲ್ಲೆಯ ಯಲಹಂಕದಲ್ಲಿ ಕ.ವಿ. ಮಂಡಳಿಯವರು 127.9 ಮೆ.ವಾ.ಸಾಮರ್ಥ್ಯದ ಡೀಸಲ್ ಜನರೇಟರ್ ಸ್ಥಾವರ ಸ್ಥಾಪಿಸಿದ್ದಾರೆ.

ಆ) ಕೋಲಾರ, ಬೀದರ್, ಬಿಜಾಪುರ ಹಾಗೂ ಮಂಡ್ಯ ಜಿಲ್ಲೆಗಳಲ್ಲಿ ಖಾಸಗಿ ಕ್ಷೇತ್ರದಲ್ಲಿ ಡೀಸಲ್ ಜನರೇಟರ್ ಸ್ಥಾವರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

ಇ) ಇಲ್ಲ

ಈ) ಖಾಸಗಿ ಕ್ಷೇತ್ರದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ. ಖಾಸಗಿಯವರು ವಿದ್ಯುತ್ ಯೋಜನೆಗಳನ್ನು ಸ್ಥಾಪಿಸಲು ಮುಂದಾದರೆ ಕರ್ನಾಟಕ ವಿದ್ಯುತ್ ನಿಗಮ: ಕರ್ನಾಟಕ ಸರ್ಕಾರವು ಕ್ಲಿಯರೆನ್ಸ್‌ಗಳನ್ನು ಅವರಿಗೆ ವರ್ಗಾಯಿಸಲು ತೀರ್ಮಾನಿಸಿತು. ಅದರಂತೆ ಈ ಯೋಜನೆಯನ್ನು ಕರ್ನಾಟಕ ವಿದ್ಯುತ್ ನಿಗಮವು ಖಾಸಗಿಯವರಿಗೆ ಕೊಡುವ ಬಗ್ಗೆ ಪರಿಶೀಲನೆಯಲ್ಲಿದೆ.

ಉ) -ಅನ್ವಯಿಸುವುದಿಲ್ಲ-

ಜಲವಿದ್ಯುತ್ ಘಟಕಗಳು

99-ಶ್ರೀ ಡಿ.ಬಿ. ಚಂದ್ರೇಗೌಡರು (ತೀರ್ಥಹಳ್ಳಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊಸದಾಗಿ ಕೈಗೊಳ್ಳಲು ಉದ್ದೇಶವಿರುವ ಜಲವಿದ್ಯುತ್ ಘಟಕಗಳೆಷ್ಟು?

ಆ) ಇವುಗಳಲ್ಲಿ ಎಷ್ಟನ್ನು ಕೇಂದ್ರದ ಅನುಮತಿಗಾಗಿ ಕಳುಹಿಸಿಕೊಡಲಾಗಿದೆ?

ಇ) ಕೇಂದ್ರ ಸರ್ಕಾರದಿಂದ ಇದುವರೆಗೂ ಅನುಮತಿ ಸಿಗದಿರಲು ಕಾರಣಗಳೇನು?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಆರು (6)

ಆ) ಮೂರು (3)